**<u>ಅಸಲು ದಾವಾ ಸಂಖ್ಯೆ -47/2022</u>** **ಪಿ.ಡಬ್ಲ್ಯೂ:-3**

ದಿನಾಂಕಃ **26.11.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಸಹಿಯನ್ನು ನ್ಯಾಯಾಲಯದ ಆವರಣದಲ್ಲಿ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ-**2** ಕ್ರಯದ ಕರಾರು ಪತ್ರದಲ್ಲಿ ನನ್ನ ತಂದೆಯ ಸಹಿ ಇರುವ ಬಗ್ಗೆ ವಕೀಲರು ತಿಳಿಸಿದ್ದರು. ನಮ್ಮ ತಂದೆ ಈಗ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಈಗೇ **6** ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಿಪಿ-**2** ರಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-**2** ಕ್ರಯದ ಕರಾರು ಪತ್ರ ಯಾವ ಸರ್ವೆ ನಂಬರ್ ಗೆ ಮತ್ತು ಎಷ್ಟು ಎಕರೆ ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಆದರೆ ನನ್ನ ತಂದೆ ಸಹಿ ಮಾಡಲು ಬರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಅವಿದ್ಯಾವಂತರಾಗಿದ್ದು ಮತ್ತು ಅವರಿಗೆ ಸಹಿ ಮಾಡಲು ಬರುವುದಿಲ್ಲ ಆದರೂ ಸಹ ಸಹಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-**2** ಕ್ರಯದ ಕರಾರು ಪತ್ರದಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿದ ಹೊನ್ನಪ್ಪನ ಹೆಸರಿನ ಮುಂದೆ ಅವರ ತಂದೆ ಹೆಸರು ನಮೂದಾಗಿರುವುದಿಲ್ಲ. ನಿಪಿ-**2** ಕ್ರಯದ ಕರಾರು ಪತ್ರ ಯಾರು ಯಾರಿಗೆ ಮತ್ತು ಎಷ್ಟು ಕ್ರಯದ ಮೊತ್ತಕ್ಕೆ ಬರೆದುಕೊಟ್ಟಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನಿಪಿ-**2** ಕ್ರಯದ ಕರಾರು ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಮತ್ತು ಸದರಿ ಕ್ರಯದ ಕರಾರು ಪತ್ರದಲ್ಲಿ

ನನ್ನ ತಂದೆ ಸಹಿ ಮಾಡದ್ದರೂ ಮಾಡಿದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.